# ಆದರ್ಶದಾದಿ ಫ್ಲಾರೆನ್ಸ್ ನೈಟಿಂಗೇಲ್

ಕುಮಾರಿ ಪುಷ್ಪ

**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ** (ಭಗವದ್ಗೀತೆ, ೧೮:೪೬) – ತನ್ನ ಸ್ವಭಾವಕ್ಕೆ ತಕ್ಕ ಕರ್ಮದ ಮೂಲಕ ಪರಮಾತ್ಮನನ್ನು ಆರಾಧಿಸಿ, ಮನುಷ್ಯನು ಪರಮ ಸಿದ್ಧಿಯನ್ನು ಪಡೆಯುತ್ತಾನೆ. ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ ಹಾಗೆ, ತ್ಯಾಗ ಮತ್ತು ಸೇವೆಗಳಿಗಾಗಿ ತನ್ನ ಸಂಪೂರ್ಣ ಜೀವನವನ್ನು ಮುಡಿಪಾಗಿಟ್ಟು, 'ನರರ ಸೇವೆಯೇ ನಾರಾಯಣ ಸೇವೆ' ಎಂದು ಭಾವಿಸಿ, ರೋಗಿಗಳ, ಗಾಯಾಳುಗಳ, ದುಃಖಿಗಳ ಸೇವೆಯನ್ನು ಅತ್ಯಂತ ಶ್ರದ್ಧೆ, ಕಾಳಜಿ ಮತ್ತು ಪ್ರೀತಿಯಿಂದ ಮಾಡಿ ಕೃತಾರ್ಥಳಾದ ಮಹಾನ್ ಕನ್ಯಾಮಣಿ ಫ್ಲಾರೆನ್ಸ್ ನೈಟಿಂಗೇಲ್.

ಇಂದಿನ ದಾದಿ ಸೇವೆಯ ಮೂಲ ಕರ್ತೃವಾಗಿ, ರೋಗಿಗಳ ಶುಶ್ರೂಷೆಯಲ್ಲಿ ಮಹಿಳೆಯರನ್ನು ತೊಡಗಿಸಿ, ಜನಾರೋಗ್ಯ ಸುಧಾರಣೆಗಳಿಗೆ ಕಾರಣಕರ್ತೆಯಾದ ಈ ಜನಸೇವಿಕೆಯ ಜನನ ೧೮೨೦ ರ ಮೇ ೧೨ ರಂದು ಇಟಲಿಯ ಫ್ಲಾರೆನ್ಸ್ ನಗರದಲ್ಲಿ, ಒಂದು ಸುಸಂಸ್ಕೃತ ಸಿರಿವಂತರ ಮನೆತನದಲ್ಲಿ ಆಯಿತು. ಫ್ಲಾರೆನ್ಸ್‌ನಲ್ಲಿ ಹುಟ್ಟಿದ್ದರಿಂದ ಇವಳ ಹೆಸರು ಫ್ಲಾರೆನ್ಸ್ ನೈಟಿಂಗೇಲ್ ಎಂದಾಯಿತು. ಕೇವಲ ಐದಾರು ವರ್ಷವಿರುವಾಗಲೇ, ಅಷ್ಟು ಚಿಕ್ಕ ವಯಸ್ಸಿನಲ್ಲೇ, ಅವಳಲ್ಲಿ ಸೇವಾಮನೋಭಾವ ಮೊಳೆಯಿತು. ಅವಳು ಬೆಳೆದು ದೊಡ್ಡವಳಾದಾಗ ಉನ್ನತ ಕುಲಕ್ಕೆ ತಕ್ಕಂತೆ ಮದುವೆಯಾಗಿ ಸಮಾಜದಲ್ಲಿ ಪ್ರತಿಷ್ಠಾವಂತಳಾಗುವಳೆಂದು ಇವಳ ತಾಯಿ ಕಾಣುತ್ತಿದ್ದ ಕನಸು ನನಸಾಗಲೇ ಇಲ್ಲ. ನಿರಂತರ ಮಾನವರ ಸೇವೆಯಲ್ಲಿ ತೊಡಗುವ ನಿಟ್ಟಿನೆಡೆ ಅವಳ ಅಂತರಾತ್ಮ ಅವಳನ್ನು ಪ್ರಚೋದಿಸುತ್ತಿತ್ತು. ಅದಕ್ಕಾಗಿ ದಾದಿಯ ತರಬೇತಿ ಪಡೆಯಬೇಕೆಂದು ಬಯಸಿದ ಅವಳ ಮನಸ್ಸು ಅತ್ತ ಕಡೆ ಆಕರ್ಷಿತವಾಯಿತು. ದಾದಿಯ ತರಬೇತಿ ಪಡೆಯಲು ತಂದೆತಾಯಿಯರ ಬಳಿ ಅನುಮತಿ ಕೇಳಿದಾಗ, ಆ ನಿರ್ಧಾರದಿಂದ ಮನೆಯಲ್ಲಿ ದೊಡ್ಡ ರಾದ್ಧಾಂತವೇ ಆಯಿತು. ಆಗಿನ ಕಾಲದಲ್ಲಿ ದಾದಿಯ ಕೆಲಸವನ್ನು ಅತ್ಯಂತ ಕೀಳು ಎಂದು ಪರಿಗಣಿಸಲಾಗಿತ್ತು. ಆದರೆ, ಎಷ್ಟೇ ವಿರೋಧ ಬಂದರೂ ನೈಟಿಂಗೇಲ್ ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ರೋಗಿಗಳ ಸೇವೆಗಾಗಿ ತಾನು ಮದುವೆಯಾಗುವುದನ್ನೇ ತ್ಯಾಗ ಮಾಡಿದಳು. ಮನೆಯಲ್ಲೇ ಕುಳಿತು ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಲಾರಂಭಿಸಿದಳು. ಜೊತೆಗೆ ಸಮಯ ಸಿಕ್ಕಾಗಲೆಲ್ಲಾ ರಹಸ್ಯವಾಗಿ ರೋಗಿಗಳ ಸ್ಥಿತಿಯ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿ ಆಸ್ಪತ್ರೆಗಳಿಗೆ ಭೇಟಿ ಕೊಡುತ್ತಿದ್ದಳು.

ಕುಮಾರಿ ಪುಷ್ಪ ಅವರು ಮೈಸೂರು ಆಶ್ರಮದ ಭಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಕೊನೆಗೊಮ್ಮೆ ದಾದಿಯಾಗಬೇಕೆನ್ನುವ ಅವಳ ಅಪಾರ ಆಸಕ್ತಿಯನ್ನು ಕಂಡು ಮನೆಯವರು ಅನುಮತಿಯನ್ನಿತ್ತಾಗ ನೈಟಿಂಗೇಲಳ ಸಂತೋಷಕ್ಕೆ ಪಾರವೇ ಇರಲಿಲ್ಲ. ೧೮೫೧ ರಲ್ಲಿ ಜರ್ಮನಿಯ ಕೈಸರ್‌ವರ್ತ್‌ನಲ್ಲಿ ದಾದಿ ಕೆಲಸದ ಅನುಭವವನ್ನು ಅವಳು ಪಡೆದಳು. ನಂತರ ಲಂಡನ್ನಿನ ಹಾರ್ಲಿ ರಸ್ತೆಯಲ್ಲಿ 'ಮಹಿಳಾ ರೋಗಿಗಳ ಪೋಷಕ ಸಂಸ್ಥೆ'ಯೆಂಬ ಆಸ್ಪತ್ರೆಯಲ್ಲಿ ಮೊತ್ತಮೊದಲನೆಯ ಹುದ್ದೆ ವಹಿಸಿಕೊಳ್ಳಲು ಮನೆ ಬಿಟ್ಟು ಹೊರಟಳು. ಇದೇ ಸಮಯದಲ್ಲಿ ಮಾರ್ಚ್ ೧೮೫೪ ರಲ್ಲಿ ಬ್ರಿಟನ್, ರಷ್ಯಾದ ವಿರುದ್ಧ ಯುದ್ಧ ಸಾರಿತು. ಆ ಚಿಕ್ಕ ಆಸ್ಪತ್ರೆಯಲ್ಲಿ ನೈಟಿಂಗೇಲ್ ಮಾಡಿದ ಪುನರ್ವ್ಯವಸ್ಥೆಯನ್ನು ಕಣ್ಣಾರೆ ಕಂಡ ಬ್ರಿಟಿಷ್ ಮಂತ್ರಿಮಂಡಲದ ಯುದ್ಧ ಶಾಖೆಯ ಕಾರ್ಯದರ್ಶಿ ಸಿಡ್ನಿ ಹರ್ಬರ್ಟ್, ಕ್ರಿಮಿಯಾ ಯುದ್ಧಕ್ಷೇತ್ರಕ್ಕೆ ಒಂದು ವೈದ್ಯಕೀಯ ನಿಯೋಗವನ್ನು ಕರೆದೊಯ್ಯುವಂತೆ ಅವಳಿಗೆ ಕರೆಕೊಟ್ಟ. ಬ್ರಿಟಿಷ್ ಸೇನಾ ಆಸ್ಪತ್ರೆಗಳಲ್ಲಿಯ ಕರಾಳ ಸ್ಥಿತಿಯ ವಿಷಯವನ್ನು ಲಂಡನ್ನಿನ ಟೈಮ್ಸ್ ಪತ್ರಿಕೆಯ ವಿಶೇಷ ಬಾತ್ಮೀದಾರ ಹೊರಗೆಡಹಿದ್ದು ಎಲ್ಲರ ಬಾಯಲ್ಲೂ ಸುದ್ದಿಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿ ಹೋಗಿ ಸೇವೆ ಮಾಡಬೇಕೆಂದು ಅವಳಿಗೆ ಮನಸ್ಸಾಯಿತು. ಇವಳ ಆಸೆಯಂತೆಯೇ ಸರಕಾರದ ಅನುಮತಿ ಪತ್ರವೂ ದೊರೆಯಿತು. ನೈಟಿಂಗೇಲ್ ತಡಮಾಡದೆ ಮೂವತ್ತೆಂಟು ಮಹಿಳಾ ಸಹಯೋಗಿಗಳನ್ನೂ ಜೊತೆಗೆ ಗಾಯಾಳುಗಳನ್ನು ಉಪಚರಿಸಲು ಬೇಕಾದ ಅವಶ್ಯಕ ವಸ್ತುಗಳನ್ನೂ ತೆಗೆದುಕೊಂಡು ಕ್ರಿಮಿಯಾಕ್ಕೆ ಹಡಗಿನಲ್ಲಿ ಹೊರಟಳು. ಅಲ್ಲಿಯ ಸ್ಥಿತಿ ಚಿಂತಾಜನಕವಾಗಿತ್ತು. ಐನೂರು ರೋಗಿಗಳನ್ನು ಒಟ್ಟಿಗೆ ಆರೈಕೆ ಮಾಡಬೇಕಾಗಿತ್ತು. ಯಾವ ಸೌಲಭ್ಯವೂ ಇಲ್ಲದೆ ಕೊಳಕಾಗಿದ್ದ ದೊಡ್ಡ ಹರಕು ಮುರುಕು ಕಟ್ಟಡಗಳೇ ಆಸ್ಪತ್ರೆಯಾಗಿತ್ತು. ರೋಗಿಗಳಿಗೆ ಗಾಳಿ ಬೆಳಕಿಗೆ ಅವಕಾಶವೇ ಇರಲಿಲ್ಲ. ಅದಲ್ಲದೆ ನೀರಿಗೆ ಕೂಡ ಪರದಾಟ. ಕ್ರಿಮಿಯಾದ ಈ ಜನರ ದೊಡ್ಡಿಯಲ್ಲಿ ವಿಶೇಷವಾದ ವೈದ್ಯಕೀಯ ಸಾಧನಗಳು ಮತ್ತು ಪರಿಕರಗಳು ದೊರೆಯುವುದಿರಲಿ, ಸಾಮಾನ್ಯ ಚಿಕಿತ್ಸೆಗೆ ಬೇಕಾದ ಅನುಕೂಲತೆಗಳೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿದ್ದ ಆಸ್ಪತ್ರೆ ನೈಟಿಂಗೇಲಳ ಕರ್ತವ್ಯಪರಾಯಣತೆ, ಉದಾತ್ತ ಗುಣಗಳು, ಶ್ರದ್ಧೆ ಇವುಗಳಿಂದ ಲವಲವಿಕೆಯನ್ನು ಪಡೆಯಿತು. ರೋಗಿಗಳ ಬಗ್ಗೆ ಆಕೆಗೆ ಅದೆಷ್ಟು ಕಾಳಜಿ, ಪ್ರೀತಿ ಇತ್ತೆಂದರೆ ತನ್ನೆಲ್ಲಾ ಸುಖವನ್ನು ತ್ಯಾಗಮಾಡಿ ಹಗಲೂ ರಾತ್ರಿಯೆನ್ನದೆ ಅವರ ಆರೋಗ್ಯದ ಕಡೆ ಅವಳು ಗಮನ ಹರಿಸಿದಳು. ಎಲ್ಲಿ ತ್ಯಾಗಭಾವನೆಯಿರುತ್ತದೋ ಅಲ್ಲಿ ಯಥಾರ್ಥ ಪ್ರೇಮ ಉದಯವಾಗುತ್ತದೆ. ಆಸ್ಪತ್ರೆಗೆ ಸೇರಿದ ಅರ್ಧಭಾಗ ಜನರು ಸಾಯುತ್ತಿದ್ದರು. ಅಧಿಕಾರಿಗಳ ಉದಾಸೀನತೆ, ಹೊಟ್ಟೆಕಿಚ್ಚು, ಕುತಂತ್ರಗಳು ಹೆಜ್ಜೆಹೆಜ್ಜೆಗೂ ಅವಳಿಗೆ ತೊಡಕನ್ನುಂಟುಮಾಡುತ್ತಿದ್ದರೂ ಇದಾವುದನ್ನೂ ಲೆಕ್ಕಿಸದೆ

ಫ್ಲಾರೆನ್ಸ್ ತನ್ನ ಧೈರ್ಯ ಸಾಹಸಗಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಟ್ಟಳು. ಯಾವ ವ್ಯಕ್ತಿ ಇತರರ ಹಿತ, ಸುಖವನ್ನೇ ತನ್ನ ಕರ್ತವ್ಯವೆಂದು ತಿಳಿಯುತ್ತಾನೋ ಸ್ವಾಭಾವಿಕವಾಗಿಯೇ ಆತನ ಅಂತಃಕರಣದಲ್ಲಿ ತ್ಯಾಗ, ದಯೆ, ಸಹಾನುಭೂತಿ, ಸೇವಾ ಮನೋಭಾವ, ಸಂಯಮ ಮತ್ತು ಶುದ್ಧ ಸದಾಚಾರದ ಭಾವನೆಗಳು ಉದಯವಾಗುತ್ತವೆ ಮತ್ತು ಅವುಗಳು ಮತ್ತಷ್ಟು ವರ್ಧಿಸುತ್ತಲೇ ಇರುತ್ತವೆ. ಜೊತೆಗೆ ಎಷ್ಟೆಷ್ಟು ಈ ಭಾವನೆಗಳ ಅನುಸಾರ ಕರ್ಮ ಮಾಡುವುದರಲ್ಲಿ ಆ ವ್ಯಕ್ತಿ ತತ್ಪರನಾಗಿರುತ್ತಾನೋ ಅಷ್ಟಷ್ಟು ಈ ಪವಿತ್ರಭಾವನೆಗಳು ಇನ್ನೂ ಅಧಿಕವಾಗಿ, ಪರಿಶುದ್ಧತೆ, ಶಕ್ತಿ ಮತ್ತು ಉಲ್ಲಾಸಗಳ ಧಾರೆಯ ಪ್ರವಾಹ ತೀವ್ರರೂಪದಲ್ಲಿ ಅವನಲ್ಲಿ ಹರಿಯುತ್ತದೆ. ಹಾಗೆಯೇ ನೈಟಿಂಗೇಲಳಲ್ಲಿದ್ದ ಮೇಲಿನ ಉದಾತ್ತ ಗುಣಗಳ ಪರಿಣಾಮದಿಂದ ಔಷಧಿಗಳು, ಬಟ್ಟೆಗಳು, ಆಹಾರ ಪದಾರ್ಥಗಳು ಗಾಯಾಳುಗಳಿಗೆ ಬಂದು ತಲುಪಿದವು. ಎಲ್ಲರೂ ಫ್ಲಾರೆನ್ಸಳನ್ನು ಪ್ರಶಂಸಿಸುವವರೇ. ಇದನ್ನು ಕಂಡು ಉಳಿದ ವೈದ್ಯರು ಒಳಒಳಗೇ ಹೊಟ್ಟೆಕಿಚ್ಚುಪಟ್ಟರು. ಆದರೆ ನೈಟಿಂಗೇಲ್ ತನ್ನ ಸೇವಾವ್ರತದಲ್ಲಿ ಅಚಲಳಾಗಿದ್ದಳು. ದಿನದ ಇಪ್ಪತ್ತು ಗಂಟೆಗಳ ಹೊತ್ತು ಓಡಾಡುತ್ತಾ ಅಲ್ಲಿದ್ದ ಅವ್ಯವಸ್ಥೆಯನ್ನು ಹತೋಟಿಗೆ ತರಲು ಮಾನವ ಸಾಮರ್ಥ್ಯಕ್ಕೆ ಮೀರಿದ ಪ್ರಯತ್ನಗಳನ್ನೇ ಅವಳು ಮಾಡಬೇಕಾಯಿತು. ತಾನೇ ಸ್ವತಃ ಆಸ್ಪತ್ರೆಯನ್ನು ತೊಳೆದು ಚೊಕ್ಕಟಪಡಿಸಿದಳು; ಅಡುಗೆ ಮನೆಯನ್ನು ಒಂದು ವ್ಯವಸ್ಥೆಗೆ ತಂದಳು. ಈಗ ಪರಿಸರವೆಲ್ಲ ಸ್ವಚ್ಛ ಹಾಗೂ ನಿರ್ಮಲತೆಯಿಂದ ಕೂಡಿ ರೋಗಿಗಳೆಲ್ಲರೂ ಪ್ರಸನ್ನಚಿತ್ತರಾಗಿ ಕಾಣುತ್ತಿದ್ದರು. ಅಶಾಂತಿಯ ಮಡುವಾಗಿದ್ದ ಆ ನರಕಭೂಮಿಯನ್ನು ನೈಟಿಂಗೇಲ್ ಹೀಗೆ ಸ್ವರ್ಗವನ್ನಾಗಿಸಿದಳು. ರೋಗಿಗಳ ಬಗ್ಗೆ ಅವಳಿಗೆಷ್ಟು ಕಾಳಜಿಯೆಂದರೆ ಪ್ರತಿದಿನ ಅರ್ಧರಾತ್ರಿಯಲ್ಲೂ ಆಗಾಗ ತಾನೆ ದೀಪ ಹಿಡಿದುಕೊಂಡು ಹೋಗಿ, ರೋಗಿಗಳ ಆವಶ್ಯಕತೆಯನ್ನು ತಾಯಿಯಂತೆ ಗಮನಿಸಿಕೊಳ್ಳುತ್ತಿದ್ದಳು. ಅದೇ ದೀಪದ ಬೆಳಕಿನಲ್ಲಿ, ಸೈನಿಕರು ಸಾವನ್ನಪ್ಪಿದಾಗಲೆಲ್ಲಾ ಅದೆಷ್ಟೋ ರಾತ್ರಿಗಳು ಕುಳಿತು, ಪ್ರತಿಯೊಬ್ಬ ಸೈನಿಕನ ಮನೆಗೆ ಸ್ವತಃ ಪತ್ರ ಬರೆದು ಅವರ ಬಂಧುಬಾಂಧವರಿಗೆ ವಿಷಯ ತಿಳಿಸುತ್ತಿದ್ದಳು. ನೈಟಿಂಗೇಲಳ ಈ ನಿಸ್ವಾರ್ಥ ಸೇವೆಯಿಂದ ಅಲ್ಲಿದ್ದ ಅಶಾಂತಿಯು ಕಳೆದು ಶಾಂತಿಯು ನೆಲೆಗೊಂಡಿತು. ಫ್ಲಾರೆನ್ಸಳ ಈ ರೀತಿಯ ಸೇವೆಯನ್ನು ಕಂಡಾಗ ನಮಗೆ ಶ್ರೀಮಾತೆ ಶಾರದಾದೇವಿಯವರು ಮಾಡುತ್ತಿದ್ದ ಸೇವೆ ನೆನಪಿಗೆ ಬರುತ್ತದೆ. ಶ್ರೀಮಾತೆಯವರು ನಹಬತ್ ಖಾನೆಯ ಅತ್ಯಂತ ಕಿರಿದಾದ ಕೋಣೆಯಲ್ಲಿ ವಾಸಿಸುತ್ತ ತಮಗೆ ಎಷ್ಟೇ ಅನಾನುಕೂಲವಾದರೂ ಪತಿಸೇವೆ ಮತ್ತು ಭಕ್ತರ ಸೇವೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು; ವಿಶ್ರಾಂತಿಯನ್ನೇ ಬಯಸದೆ ಅನವರತ ದುಡಿಯುತ್ತಿದ್ದರು. ಕೆಲವು ಬಾರಿ ಹಗಲಿರುಳೆನ್ನದೆ ಆಹಾರದ ತಯಾರಿ ಸಾಗುತ್ತಿತ್ತು. ಶ್ರೀರಾಮಕೃಷ್ಣರನ್ನು ಕಾಣಲು ಬರುವ ಎಲ್ಲ ಭಕ್ತರಿಗೂ ಎಲ್ಲ ಸಮಯದಲ್ಲೂ ಈ ಅನ್ನಪೂರ್ಣೆಯ ಮಮತೆಯ ಹಸ್ತದಿಂದ ತಯಾರಾದ ಭಗವತ್‌ಪ್ರಸಾದ ಸದಾ ಸಿದ್ಧವಾಗಿರುತ್ತಿತ್ತು.



ಹೀಗೆ ಫ್ಲಾರೆನ್ಸಳ ನಿರಂತರ ಸೇವೆಯಿಂದ ಆರೇ ತಿಂಗಳಲ್ಲಿ ಸೈನಿಕರು ಸಾಯುವ ಪ್ರಮಾಣ ಕೇವಲ ಶೇಕಡ ಎರಡಕ್ಕೆ ಇಳಿಯಿತು. ಇವಳ ಸಹಾಯಕ್ಕಾಗಿ ಇಂಗ್ಲೆಂಡಿನಿಂದ ಇನ್ನಷ್ಟು ದಾದಿಯರನ್ನು ಕಳುಹಿಸಿಕೊಡಲಾಯಿತು. ಬೇರೆ ಆಸ್ಪತ್ರೆಗಳೂ ನೈಟಿಂಗೇಲಳ ತಂಡದ ಉಸ್ತುವಾರಿಗೆ ಒಳಪಟ್ಟವು. ಅಲ್ಲದೆ ಸಾಮಾನ್ಯ ಸೈನಿಕರ ಚಿಕಿತ್ಸೆ ಪೋಷಣೆಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿದ್ದರಿಂದ, ಅವರೆಲ್ಲರೂ ಫ್ಲಾರೆನ್ಸಳನ್ನು ಆರಾಧಿಸತೊಡಗಿದರು.

ಫ್ಲಾರೆನ್ಸಳ ಈ ಮಹಾ ಸಾಧನೆಗಳ ಕತೆ ಇಂಗ್ಲೆಂಡಿಗೆ ಮುಟ್ಟಿದಾಗ ಜನ ಇವಳನ್ನು ರಾಷ್ಟ್ರೀಯ ವೀರ ರಮಣಿಯಾಗಿ ಆದರದಿಂದ ಕಂಡರು. ೧೮೫೬ ರಲ್ಲಿ ಕ್ರಿಮಿಯಾ ಯುದ್ಧ ಸಮಾಪ್ತವಾಯಿತು. ಫ್ಲಾರೆನ್ಸ್ ಇಂಗ್ಲೆಂಡಿಗೆ ಮರಳಿದಾಗ ಬ್ರಿಟಿಷರು ಮೆರವಣಿಗೆ ಮಾಡಿ ಆಕೆಗಾಗಿ ಸ್ವಾಗತ ಸತ್ಕಾರವನ್ನು ಆಯೋಜಿಸಿದರು. ಆಕೆಯ ಸೇವೆಯ ಮೆಚ್ಚುಗೆಯ ದ್ಯೋತಕವಾಗಿ ಜನರು ಚಂದಾ ಕೂಡಿಸಿ ಆ ನಿಧಿಯನ್ನು ಫ್ಲಾರೆನ್ಸ್‌ಳಿಗೆ ಅರ್ಪಿಸಿದರು.

ಸತತವಾದ ದುಡಿತದಿಂದ ಫ್ಲಾರೆನ್ಸ್ ನಿಶ್ಶಕ್ತಳಾದಳು. ಕೆಲವು ವೇಳೆ ಮೂರ್ಛೆ ಹೋಗುತ್ತಿದ್ದಳು ಕೂಡ. ವೈದ್ಯರು ವಿಶ್ರಾಂತಿ ತೆಗೆದುಕೊಳ್ಳಲು ಸಲಹೆಯಿತ್ತಾಗ ಫ್ಲಾರೆನ್ಸ್‌ಳಿಗೆ ಎಲ್ಲಿ ತಾನು ಸತ್ತು ಹೋಗುತ್ತೇನೋ, ತನ್ನ ಕೆಲಸಗಳೆಲ್ಲಾ ಅರ್ಧಕ್ಕೆ ನಿಂತುಬಿಡುತ್ತದೋ ಎಂದು ಭಯವಾಗುತ್ತಿತ್ತು. ಫ್ಲಾರೆನ್ಸ್ ಸಾವಿಗೆ ಭಯಪಡುತ್ತಿರಲಿಲ್ಲ. ತಾನು ಇನ್ನೂ ಮಾಡಬೇಕಾದ ಮಹತ್ತರ ಯೋಜನೆಯನ್ನು ಕುರಿತು ಚಿಂತಿಸುತ್ತಿದ್ದಳು, ಅಷ್ಟೆ. ನೈಟಿಂಗೇಲ್ ಇಂಗ್ಲೆಂಡಿನ ಒಂದು ಚಿಕ್ಕ ಮನೆಯಲ್ಲಿ ಏಕಾಂತವಾಗಿ ವಾಸವಾಗಿದ್ದುಕೊಂಡು, ಸ್ವಲ್ಪ ದಿನ ವಿಶ್ರಾಂತಿಯನ್ನು ಪಡೆದಳು. ಆನಂತರ ಹಗಲೂ ರಾತ್ರಿ ಓದು–ಬರೆಯುವುದೇ ಆಗುತ್ತಿತ್ತು. ಪತ್ರವ್ಯವಹಾರಗಳು, ಆಸ್ಪತ್ರೆಗೆ ಬರುವ ಅಧಿಕಾರಿಗಳನ್ನು ಭೇಟಿಮಾಡುವುದು ಇತ್ಯಾದಿ ಕೆಲಸಗಳ ಒತ್ತಡ ಆಕೆಗೆ ಬಹಳಷ್ಟಿತ್ತು. ಇದರ ಜೊತೆಗೆ ಭಾರತದಲ್ಲಿ ಸೇನೆಯ

ಆರೋಗ್ಯ ವ್ಯವಸ್ಥೆಯ ಸ್ಥಿತಿಗತಿಗಳನ್ನು ತನಿಖೆ ಮಾಡಲು ಒಂದು ಆಯೋಗ ನೇಮಕವಾಗಿ, ೧೮೫೪ ರಲ್ಲಿ ಆ ವರದಿಯನ್ನು ನೈಟಿಂಗೇಲಳಿಗೆ ಒಪ್ಪಿಸಲಾಯಿತು. ಫ್ಲಾರೆನ್ಸಳ ಚಟುವಟಿಕೆಗಳಲ್ಲಿ ಸೇನೆಗಾಗಿ ಕೆಲಸ ಮಾಡುವುದು ಕೂಡ ಒಂದು ಭಾಗವಾಗಿತ್ತು. ೧೮೫೮ ರಲ್ಲಿ 'ಬ್ರಿಟಿಷ್ ಸೇನೆಯ ಆರೋಗ್ಯ ಸಾಮರ್ಥ್ಯ, ಆಸ್ಪತ್ರೆಯ ಆಡಳಿತದ ಸಂಬಂಧದ ವಿಷಯಗಳ ಮೇಲಿನ ಟಿಪ್ಪಣಿಗಳು' ಎಂಬ ದೊಡ್ಡ ಪುಸ್ತಕವನ್ನು ಅವಳು ಪ್ರಕಟಿಸಿದಳು. ಆಕೆಗೆ ಈ ಕೆಲಸದಲ್ಲಿ ಇಂಗ್ಲೆಂಡಿನ ಮಂತ್ರಿಮಂಡಲದ ಸದಸ್ಯನಾದ ಸಿಡ್ನಿ ಹರ್ಬರ್ಟ್ ಮತ್ತು ಪ್ರಸಿದ್ಧ ಕವಿ ಆರ್ಥರ್ ಕ್ಲಾಡನ್ – ಇವರುಗಳ ತುಂಬು ಸಹಕಾರವಿತ್ತು. ಸರ್ಕಾರಿ ಆಸ್ಪತ್ರೆಗಳ ಸುಧಾರಣೆಯ ಬಗ್ಗೆ ಹಲವರ ವಿರೋಧವಿದ್ದರೂ, ತನ್ನ ಅಚಲ ನಿರ್ಧಾರ, ಧೈರ್ಯ ಮತ್ತು ಅಪಾರ ಸಹನೆಯಿಂದ ನೈಟಿಂಗೇಲ್ ಈ ಕಾರ್ಯದಲ್ಲಿ ಸಫಲತೆಯನ್ನು ಪಡೆದಳು.

ತಾನು ಮಾಡಿದ ಸೇವೆಯ ಮೆಚ್ಚುಗೆಗಾಗಿ ಸಮರ್ಪಿಸಿದ್ದ ಹಣದಿಂದ ೧೮೬೦ ರಲ್ಲಿ 'ದಾದಿಯರ ಸೇಂಟ್ ಥಾಮಸ್ ಆಸ್ಪತ್ರೆ' ಎಂಬ ತರಬೇತಿ ಶಾಲೆಯನ್ನು ನೈಟಿಂಗೇಲ್ ತೆರೆದಳು. ಅವಳನ್ನು 'ಆಧುನಿಕ ದಾದಿಯರ ವ್ಯವಸ್ಥೆಯ ಜನನಿ' ಎಂದು ಕರೆಯಬಹುದು. ಇಂದಿನ ದಾದಿಯರ ತರಬೇತಿ ಅವಳಿಂದಲೇ ಮೊದಲಾಯಿತೆನ್ನಬಹುದು. ತರಬೇತಿಗೆ ಸೇರುವ ಒಬ್ಬೊಬ್ಬರನ್ನೂ ತಾನೇ ಸಂದರ್ಶಿಸಿ, ಕೊನೆಯತನಕ ಅವರನ್ನು ಗಮನವಿಟ್ಟು ವಿಚಾರಿಸಿಕೊಳ್ಳುತ್ತಿದ್ದಳು. ನೈಟಿಂಗೇಲ್ ದಯಾಮೂರ್ತಿ ಆಗಿದ್ದುದು ಮಾತ್ರವಲ್ಲದೆ ಶಿಸ್ತಿನ ಸಿಪಾಯಿ ಕೂಡ ಆಗಿದ್ದಳು. ವಿಪರೀತ ದುಡಿಮೆಯಿಂದ ಸ್ವತಃ ಅಶಕ್ತಳಾಗಿದ್ದರೂ ಕೆಲಸ ನಿಲ್ಲಿಸದೆ, ಬೇರೆಯವರಿಂದಲೂ ದಯಾದಾಕ್ಷಿಣ್ಯವಿಲ್ಲದೆ ಕೆಲಸ ತೆಗೆಯುತ್ತಿದ್ದಳು. ಸರ್ಕಾರದ ಯುದ್ಧ ಕಚೇರಿ ಅವಳ ಸಲಹೆ ಸೂಚನೆಗಳನ್ನೇ ನೆಚ್ಚಿಕೊಂಡಿತ್ತು. ಆರೋಗ್ಯ ವಿಚಾರದ ಕಾಗದಪತ್ರಗಳೆಲ್ಲವೂ ಆಕೆಯೆಡೆಗೇ ಹೋಗುತ್ತಿದ್ದವು. ಫ್ಲಾರೆನ್ಸಳೇ ನಿಯಮಾವಳಿಗಳನ್ನು ರಚಿಸಿ, ಅಧಿಕಾರಪತ್ರಗಳನ್ನು ಬರೆದು ದಂಡಿನ ಪಾಳಿಗಳ ಯೋಜನೆಗಳನ್ನು ಮಂಡಿಸುತ್ತಿದ್ದಳು. ನೈಟಿಂಗೇಲ್ ಎಂದೂ ಭಾರತಕ್ಕೆ ಕಾಲಿಡಲಿಲ್ಲ. ಆದರೂ ಭಾರತದ ಬಗೆಗಿನ ಮಾಹಿತಿಗಳಿಗೆ ಅವಳೇ ಅಂಗೀಕೃತ ಅಧಿಕಾರಿಯಾಗಿದ್ದಳು. ಭಾರತೀಯರ ಶಿಕ್ಷಣದ ವಿಷಯವಾಗಿ ಚರ್ಚಿಸಲು ವೈಸ್‌ರಾಯ್‌ಗಳು ಕೂಡ ಅವಳನ್ನು ಭೇಟಿ ಮಾಡುತ್ತಿದ್ದರು.

ವರ್ಷಗಳು ಕಳೆದ ಹಾಗೆಲ್ಲಾ ಫ್ಲಾರೆನ್ಸಳ ಮಾರ್ಗದರ್ಶನದಲ್ಲಿ ಸಾವಿರಾರು ದಾದಿಯರು ತರಬೇತಿ ಪಡೆದರು. ಫ್ಲಾರೆನ್ಸ್ ಆಸ್ಪತ್ರೆಗಳ ನಿರ್ವಹಣೆ ಮತ್ತು ಸುಧಾರಣೆಗಳ ಬಗ್ಗೆ ದೊಡ್ಡ ಗ್ರಂಥಗಳನ್ನೇ ಬರೆದಿದ್ದಾಳೆ. ೧೮೭೨ ರಲ್ಲಿ ಅವಳು ಅಧಿಕಾರ ಬಿಡುವ ತನಕ ಕೆಲಸದ ಜವಾಬ್ದಾರಿ ಕಡಿಮೆಯಾಗಲಿಲ್ಲ. ದಿನಕಳೆದಂತೆ ಫ್ಲಾರೆನ್ಸಳಿಗೆ ಆಧ್ಯಾತ್ಮಿಕತೆಯಲ್ಲಿ ಆಸಕ್ತಿ ಬೆಳೆಯಿತು. ಕ್ರೈಸ್ತ ಧ್ಯಾನದ ಬಗ್ಗೆ ಒಂದು ಆಧ್ಯಾತ್ಮಿಕ ಪುಸ್ತಕವನ್ನು ಬರೆದಳು. ಫ್ಲಾರೆನ್ಸಳಿಗೆ ಎಳೆಯರನ್ನು ಕಂಡರೆ ಬಲು ಪ್ರೀತಿ. ಅವರನ್ನು ಪ್ರೋತ್ಸಾಹಿಸುತ್ತ ಅವರೊಂದಿಗೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದಳು.

ಕ್ರಮೇಣ ಕಣ್ಣು ಕಾಣದಾದರೂ ಒಬ್ಬ ಆದರ್ಶ ದಾದಿಯಾಗಿ ನೈಟಿಂಗೇಲ್ ಜೀವನದಲ್ಲಿ ಪರಿಪೂರ್ಣತೆಯನ್ನು ಕಂಡುಕೊಂಡಳು. ಅವಳು ಮೃತಳಾದಾಗ ಲಂಡನ್ ನಗರದ ಪ್ರಸಿದ್ಧ ಶವಾಗಾರವಾದ ವೆಸ್ಟ್ ಮಿನಿಸ್ಟರ್ ಅಬ್ಬೆಯಲ್ಲಿ ಅವಳ ಉತ್ತರ ಕ್ರಿಯೆಯನ್ನು ಏರ್ಪಡಿಸುವ ಬದಲು, ಆಕೆಯ ಇಚ್ಛೆಯಂತೆ ಹ್ಯಾಂಪ್‌ಶೈರ್‌ನ ಆಕೆಯ ವಂಶಸ್ಥರ ಹಳ್ಳಿಯ ಸ್ಮಶಾನದಲ್ಲಿ ಸಕಲ ಬ್ರಿಟಿಷ್ ಸೇನಾ ಗೌರವದೊಡನೆ ಅಂತಿಮ ಸಂಸ್ಕಾರಗಳನ್ನು ನೆರವೇರಿಸಲಾಯಿತು. ನೈಟಿಂಗೇಲಳ ಗೌರವಾರ್ಥವಾಗಿ ವಾಟರ್‌ಲೂನಲ್ಲಿ ಸಿಡ್ನಿ ಹರ್ಬರ್ಟ್ ಮತ್ತು ಕ್ಯಾಪ್ಟನ್ ಸ್ಕಾಟ್ ಮುಂತಾದ ವೀರಯೋಧರ ಮೂರ್ತಿಗಳ ಬಳಿಯಲ್ಲೇ ಅವಳ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಅದು ಈ ವೀರ ಕನ್ಯಾಮಣಿಗೆ ಸಂದ ಗೌರವ, ಸನ್ಮಾನ. ಆ ಮೂರ್ತಿಯಲ್ಲಿ ಫ್ಲಾರೆನ್ಸಳ ಕೈಯಲ್ಲಿ ಉರಿಯುತ್ತಿರುವ ದೀಪವಿದೆ. ಈ ಮೂರ್ತಿ ಆಕೆಯ ಜೀವನಧ್ಯೇಯದ ಪ್ರತೀಕವಾಗಿದೆ. ಅನೇಕ ಜೀವಿಗಳ ಜೀವನಕ್ಕೆ ಬೆಳಕನ್ನಿತ್ತ ಸಾರ್ಥಕತೆಯನ್ನು ಈ ಪ್ರತಿಮೆ ಸೂಚಿಸುತ್ತದೆ. 'Lady with the Lamp' (ದೀಪ ಹಿಡಿದ ಭದ್ರ ಮಹಿಳೆ) ಎಂಬ ಆ ಪ್ರತಿಮೆಯ ಶೀರ್ಷಿಕೆ ಆಕೆಗೆ ಅನ್ವರ್ಥ ನಾಮವಾಗಿದೆ.

ವೈದ್ಯರು ಪದವೀಧರರಾಗಿ ವೃತ್ತಿ ಕೈಗೊಳ್ಳುವ ಮುಂಚೆ ಮಾಡುವ ಪ್ರತಿಜ್ಞೆಯಂತೆಯೇ ದಾದಿಯರೂ ಪ್ರತಿಜ್ಞೆ ಮಾಡಬೇಕು ಎಂದು ನೈಟಿಂಗೇಲ್ ಕೆಲವು ಪ್ರತಿಜ್ಞೆಯನ್ನು ಜಾರಿಗೆ ತಂದಳು. ಅವು ಹೀಗಿವೆ:

**ದೇವರ ಮುಂದೆ, ಇಲ್ಲಿ ನೆರೆದಿರುವವರ ಸಮಕ್ಷಮದಲ್ಲಿ ನಾನು ವಿಧಿವಿಹಿತವಾಗಿ ಹೀಗೆ ವಾಗ್ದಾನ ಮಾಡುತ್ತೇನೆ:**

೧. ನನ್ನ ಜೀವನವನ್ನು ನಿಷ್ಕಳಂಕವಾಗಿಟ್ಟುಕೊಂಡು ನನ್ನ ವೃತ್ತಿಯನ್ನು ಶ್ರದ್ಧಾಭಕ್ತಿಗಳಿಂದ ನಡೆಸುವೆನು.

೨. ದೇಹಕ್ಕೆ ಹಾನಿ ಮತ್ತು ಕೇಡು ತರುವ ಎಲ್ಲದರಿಂದಲೂ ನಾನು ದೂರವಿರುವೆನು. ಯಾವ ಕೆಟ್ಟ ಮದ್ದನ್ನೂ ನಾನು ಸೇವಿಸುವುದಿಲ್ಲ. ಗೊತ್ತಿದ್ದೂ ಇನ್ನೊಬ್ಬರಿಗೆ ಕೊಡುವುದೂ ಇಲ್ಲ.

೩. ನನ್ನ ವೃತ್ತಿಯ ಗುಣಮಟ್ಟವನ್ನು ಉತ್ತಮ ಮಟ್ಟಕ್ಕೆ ಏರಿಸಲು, ನನ್ನ ಕೈಲಾದುದನ್ನೆಲ್ಲ ಮಾಡುವೆನು. ವೃತ್ತಿಯಲ್ಲಿ ನನ್ನ ಗಮನಕ್ಕೆ ಬರುವ ಕುಟುಂಬ ವ್ಯವಹಾರಗಳನ್ನು, ನನಗೆ ಹೇಳಿದ ಸ್ವಂತ ವಿಷಯಗಳನ್ನು ರಹಸ್ಯವಾಗಿ ಇರಿಸಿಕೊಳ್ಳುವೆನು.

೪. ವೈದ್ಯರಿಗೆ ತಮ್ಮ ಕೆಲಸದಲ್ಲಿ ನೆರವಾಗಲು ಯತ್ನಿಸಿ, ನನ್ನ ಪೋಷಣೆಗೊಳಪಟ್ಟು ಬರುವವರ ಹಿತಕ್ಕಾಗಿ ಶ್ರದ್ಧೆ ವಹಿಸುವೆನು.

ಫ್ಲಾರೆನ್ಸ್ ನೈಟಿಂಗೇಲಳ ಈ ಅನುಪಮ ಸೇವೆಯನ್ನು ಜಗತ್ತು ಸದಾ ಸ್ಮರಿಸುತ್ತದೆ. ಪರಹಿತ ಮತ್ತು ಸೇವೆಯೇ ಯಾವಾಗ ಭಗವಂತನ ಪೂಜೆಯಾಗುವುದೋ, ಆಗ ಪ್ರತಿಯೊಂದು ಸದ್ವ್ಯವಹಾರವೂ ಭಗವದಾರಾಧನೆಯೇ ಆಗುತ್ತದೆ. ಇದರ ಫಲಸ್ವರೂಪವಾಗಿ ಜೀವನದಲ್ಲಿ ಸುಖ, ಶಾಂತಿ, ಅಧಿಕವಾದ ಸುಪ್ರಸನ್ನತೆ ಉಂಟಾಗುತ್ತದೆ. ಇವುಗಳನ್ನು ಪಡೆದ ಫ್ಲಾರೆನ್ಸಳ ಜೀವನ ಕೃತಾರ್ಥವಾಯಿತು.